ಕಥೆ

# ಮಿನುಗೆಲೆ ಮಿನುಗೆಲೆ ನಕ್ಷತ್ರ



ಮಿತ್ರಾ ವೆಂಕಟ್ರಾಜ್

ಕಲೆ: ವಿಶ್ವನಾಥ್ ಎ.ಎಸ್.

ಕೆಲವೊಂದು ಸಂದರ್ಭಗಳು, ವ್ಯಕ್ತಿಗಳು ಇದ್ದಕ್ಕಿದ್ದಂತೆ ನಮ್ಮೊಳಗಿನ ತೀರ ಹಳೆಯ ಭಾವನೆಗಳನ್ನು ಕೆದಕಿ, ನಮ್ಮೊಳಗೂ ಅಂಥದ್ದೊಂದು ವ್ಯಕ್ತಿತ್ವದ ಎಳೆ ಅಡಗಿದೆ ಎಂಬುದನ್ನು ನಮ್ಮ ಅರಿವಿಗೆ ತರುವುದಿದೆ. ಅಂಥದ್ದೊಂದು ಘಟನೆ ನನ್ನ ವೃತ್ತಿಜೀವನದ ಆರಂಭದ ದಿನಗಳಲ್ಲೇ ನಡೆದು ನನ್ನನ್ನು ಇನ್ನಿಲ್ಲದ ಅಚ್ಚರಿಗೆ ಒಳಪಡಿಸಿತ್ತು. ಇದು ನಡೆದದ್ದು ಮುಂಬಯಿಯಲ್ಲಿ. ನನಗಿನ್ನೂ ಆಗ ಮುಂಬಯಿ ಹೊಸತು. ಮಂಗಳೂರು, ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸ ಮುಗಿದ ಮೇಲೆ, ಉಡುಪು-ವಿನ್ಯಾಸಗಳ ಕ್ಷೇತ್ರದಲ್ಲಿನ ನನ್ನ ಒಲವನ್ನು ಗಮನಿಸಿದ ತಂದೆಯವರು ಫ್ಯಾಶನ್ ಜಗತ್ತಿನ ಕೇಂದ್ರವಾದ ಪ್ಯಾರೀಸಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಕಳಿಸಿದ್ದರು. ಆಫೀಸು ಕೆಲಸದಲ್ಲಿ ತಂದೆಯವರಿಗೂ ಆಗಿಂದಾಗ ಪ್ಯಾರೀಸ್ ಪ್ರವಾಸ ಇರುತ್ತಿದ್ದುದೂ ಇದಕ್ಕೊಂದು ಕಾರಣವಾಗಿದ್ದಿರಬಹುದು. ನಾಲ್ಕು ವರ್ಷ ಪ್ಯಾರೀಸಿನಲ್ಲಿ, ಮತ್ತೆರಡು ವರ್ಷ ನ್ಯೂಯಾರ್ಕಿನಲ್ಲಿ ತರಬೇತು ಪಡೆದು ಈಗ ಎರಡು ವರ್ಷಗಳ ಕೆಳಗಷ್ಟೇ ನಮ್ಮ ದೇಶದ ಫ್ಯಾಶನ್ ರಾಜಧಾನಿ ಎಂದು ಹೆಸರಾದ ಮುಂಬಯಿಗೆ ಬಂದಿದ್ದೆ. ವರುಣ್ ವೆರಾನಿ ಫ್ಯಾಷನ್ ಹೌಸಿಗೆ ಸೇರಿ ವರ್ಷವಾಗುತ್ತಿತ್ತಷ್ಟೆ.

ಆವತ್ತು ಆಫೀಸಿನಲ್ಲಿ ತುಸು ನಿರಾಳವಾದ ವಾತಾವರಣವಿತ್ತು. ಉಡುಪುಗಳನ್ನು ಒತ್ತರೆ ಮಾಡಿ ಇಡುವ ಕೆಲಸದ ನಡುವೆ, ಮುಂಚಿನ ದಿನ ಫ್ಯಾಶನ್ ಶೋಗೆ ಬಂದ ಅತಿಥಿಗಳ ಬಗ್ಗೆ ಮಾತು ಸಾಗಿತ್ತು. ನನಗಾದರೋ ಹಿಂದಿನ ದಿನವೆಂಬುದು ಕನಸಿನಲ್ಲಿ ತೇಲಿ ಹೋದಂತೆ ಅನಿಸಿತ್ತು. ಆ ಫ್ಯಾಷನ್ ಹೌಸಿನಲ್ಲಿ ಕೆಲಸಕ್ಕೆ ಸೇರಿ ವರ್ಷವೂ ಆಗಿರಲಿಲ್ಲ. ಸೇರಿದ ಮೇಲೆ ಆದ ಮೊದಲ ಪ್ರದರ್ಶನ ಅದು. ಆರು ತಿಂಗಳ ಎಡೆಬಿಡದ ಕೆಲಸದ ಒತ್ತಡ-ಓಡಾಟಗಳಿಂದಾದ ಸುಸ್ತು ಬೇರೆ.